ನಿಮಗೆ ಅಂಥವರು ಪರಿಚಯವಿರ್ತಾರೇನೋ ಅಂತ. ನಿಮಗೆ ಕೂಡ ಮ್ಯೂಸಿಕ್ ಅಂದ್ರೆ ಇಷ್ಟ ಅಂತ ಗೊತ್ತು ನನಗೆ. ಚಿಕ್ಕಂದಿನಲ್ಲಿ ಶಾಲೆಯಲ್ಲಿ ಮೈಕಿನ ಮುಂದೆ ನಿಂತು ದೊಡ್ಡ ಫೋಜು ಕೊಟ್ಟು ಹಾಡುತ್ತಿದ್ದೆ ಅಂತ ಬರೆದುಕೊಂಡಿದ್ದೀರಲ್ಲ' ಅಂದಳಾಕೆ ನನ್ನ ಕತೆಯೊಂದನ್ನು ನೆನಪಿಸಿಕೊಂಡು ಕಿಸಕ್ಕನೆ ನಗುತ್ತ.

'ನಮ್ಮವನು ನಾಲ್ಕು ಜನರೊಂದಿಗೆ ಬೆರೆಯುವ ಸ್ವಭಾವದವನಲ್ಲಾರೀ. ಸ್ಪೆಷಲ್ ಇಂಟರೆಸ್ಟ್ ತೆಗೆದುಕೊಂಡು ಮನೆಗೆ ಬಂದು ಹೇಳಿಕೊಡುವವರಿದ್ದರೆ ನೋಡಿ. ಅವರ ಮನೆಗೆ ನಾವು ಹೋಗುವ ಪದ್ಧತಿಯಾದರೂ ಪರವಾಗಿಲ್ಲ. ಇಲ್ಲಿಗೇ ತುಂಬಾ ತಡ ಮಾಡಿದೆ. ಪ್ಲೀಸ್. ಸ್ವಲ್ಪ ಅರ್ಜೆಂಟ್' ಅಂದಳು ಮತ್ತೆ.

ಆಕೆ ಫೋನ್ ಇಟ್ಟ ಮರುಕ್ಷಣವೇ ಆ ವಿಷಯ ಮರೆತುಬಿಟ್ಟೆ.

ಮತ್ತೆ ಮಾಡಿದಳು.

'ವೋಕಲ್ ಬೇಡಾರೀ. ಅವನು ಮಾತಾಡೋಕೆ ಬಾಯಿ ತೆರೆಯೋದೇ ಕಡಿಮೆ ಮಾಡಿದಾನೆ, ಇನ್ನು ಹಾಡೋಕೆಲ್ಲಿಂದ ತೆರೀತಾನೆ. ಇನ್‌ಸ್ಟ್ರುಮೆಂಟಲ್ ಆದರೆ ಬೆಟರ್. ಫ್ಲೂಟ್, ಗಿಟಾರ್, ಡ್ರಮ್ಸ್, ಕೀಬೋರ್ಡ್... ಕೀಬೋರ್ಡ್ ಆದ್ರೆ ಚೆನ್ನಾಗಿರುತ್ತಲ್ಲ. ಮಕ್ಕಳಿಗೆ ಇಂಟರೆಸ್ಟಿಂಗ್ ಆಗಿರುತ್ತೆ' ಅಂದಳು.

ನಾನು ಮಾತಾಡದೆ ಇಟ್ಟುಬಿಟ್ಟೆ.

ಇಂಥವರು ಕೆಲವರು ಗೊತ್ತು ನನಗೆ.

ದುಡ್ಡಿದೆಯಲ್ಲ ಅಂತ ಮಕ್ಕಳನ್ನು ಪೇಂಟಿಂಗಿಗೋ, ಡಾನ್ಸಿಗೋ, ಮ್ಯೂಸಿಕ್ಕಿಗೋ ಕೋರ್ಸಿನ ಲೆಕ್ಕದಲ್ಲಿ ಸೇರಿಸುವುದು, ಆಮೇಲೆ ಅವರನ್ನು ಅಲ್ಲಿ ಇಲ್ಲಿ ಸ್ಟೇಜ್‌ಗೇರಿಸಿ ಫೋಟೊ ತೆಗೆಯುವುದು, ಪತ್ರಿಕೆಗಳಲ್ಲಿ ಏನಾದರೂ ಪ್ರಕಟವಾದರೆ ಆ ಕ್ಲಿಪ್ಪಿಂಗುಗಳನ್ನೆಲ್ಲ ನೀಟಾಗಿ ಸ್ಪೈರಲ್ ಬೈಂಡಿಂಗ್ ಮಾಡಿಸಿ ಮನೆಗೆ ಬಂದವರನ್ನು ಡ್ರಾಯಿಂಗ್ ರೂಮಿನಲ್ಲಿ ಕೂರಿಸಿ ಅವುಗಳನ್ನು ಡಿಸ್‌ಪ್ಲೇ ಮಾಡುವುದು...

ಆಕೆ ಬಿಡಲಿಲ್ಲ. ಇವತ್ತು ಮತ್ತೊಮ್ಮೆ ಮಾಡಿದಳು.

ಇನ್ನೂ ಗೋಗರೆಸಿಕೊಂಡರೆ ಚೆನ್ನಾಗಿರುವುದಿಲ್ಲ ಎಂದುಕೊಂಡು ಸುಮ್ಮನೆ ಮಾತಿಗೆ ಅಂತ ಅಯ್ಯಪ್ಪನ ಪ್ರಸ್ತಾಪ ಮಾಡಿದೆ.

'ನನ್ನ ಫ್ರೆಂಡ್ ಅಯ್ಯಪ್ಪ ಅಂತ ಇದ್ದಾನೇರಿ. ಇತ್ತೀಚೆಗಷ್ಟೇ ಮದ್ರಾಸಿನಿಂದ ಶಿಫ್ಟ್ ಆಗಿದಾನೆ. ಒಳ್ಳೆ ಕೀಬೋರ್ಡ್ ಪ್ಲೇಯರ್. ಅವನೇನಾದ್ರೂ ಹೇಳ್ತಾನೇನೋ ಮಾತಾಡಿ ತಿಳ್ಕೊಳ್ತೀನಿ' ಅಂದೆ.

ಅದೇ ತಪ್ಪಾಯಿತು. ಆಕೆ ಆ ಮಾತುಗಳನ್ನು ಮತ್ತೂ ಅತಿಯಾಗಿ ತೆಗೆದುಕೊಂಡು ತಕ್ಷಣವೇ ಒಂದು ಕಾಸ್ಟ್‌ಲೀ ಕೀಬೋರ್ಡ್ ಕೊಂಡುಕೊಂಡು ಮಗನನ್ನು ಜೊತೆ ಕರೆದುಕೊಂಡು ಹಾಸ್ಪಿಟಲ್ ಡ್ಯೂಟಿ ಬಂಕ್ ಮಾಡಿ ಹೇಳದೆ ಕೇಳದೆ ಸಂಜೆ ಹೊತ್ತಿಗೆ ನಮ್ಮ ಆಫೀಸಿಗೆ ಬಂದುಬಿಟ್ಟಳು. ಇನ್ನು ಅಯ್ಯಪ್ಪನ ಹತ್ತಿರ ಹೋಗುವವರೆಗೆ ಬಿಡಲೇ ಇಲ್ಲ. ಪ್ರಾಣ ಹೋಗುವಷ್ಟು ಕೆಲಸ ಮಾಡಿದಳು.

ಈಗ ನೋಡಿದರೆ ಅವನು ಆಗದು ಅಂದ.

ಇದರಿಂದ ಹೇಗೆ ಹೊರಬೀಳುವುದಪ್ಪ ಅಂತ ನಾನು ಆಲೋಚಿಸ್ತಿದ್ದೀನಿ.

ಕಾರು ಲೋಟಸ್ ಪಾಂಡ್ ದಾಟಿ ದಿನ್ನೆ ಹತ್ತೋ ಹೊತ್ತಿಗೆ ಸಣ್ಣಗೆ ಜುಮುರು ಮಳೆ ಶುರುವಾಯಿತು. ನಿಯಾನ್ ಲೈಟಿನ ಬೆಳಕಿನಲ್ಲಿ ಸಣ್ಣ ಸಣ್ಣಗೆ ಕಾಣಿಸಿದ ಹನಿಗಳು ಸ್ವಲ್ಪ